



## ಪ್ರಶ್ನೋತ್ತರಗಳು

### ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ:

**ಪ್ರಶ್ನೆ 1:**

**ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಎಂತಹ ಕಥೆಯೆಂದು ಬಣ್ಣಿಸಿದ್ದಾರೆ?**

**ಉತ್ತರ:**

ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ‘ಯುದ್ಧ ಬಿಟ್ಟು ಪ್ರೀತಿ ಕೊಟ್ಟ ಕಥೆ’ಯೆಂದು ಬಣ್ಣಿಸಿದ್ದಾರೆ.

**ಪ್ರಶ್ನೆ 2:**

**ಸಿದ್ಧಾರ್ಥ ಯಾರ ಹಾಗೂ ಯಾವುದರ ಮೋಹವನ್ನು ತೊರೆದನು?**

**ಉತ್ತರ:**

ಸಿದ್ಧಾರ್ಥ ಪತ್ನಿ, ಮಗ ಮತ್ತು ಅರಮನೆಯ ಮೋಹವನ್ನು ತೊರೆದನು.

**ಪ್ರಶ್ನೆ 3:**

**ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದುದ್ದೇನು?**

**ಉತ್ತರ:**

ಕಾಡನ್ನು ಅಲೆದ ಸಿದ್ಧಾರ್ಥನಿಗೆ ನಾಡಿನರ್ಥ ಹೊಳೆಯಿತು.

**ಪ್ರಶ್ನೆ 4:**

**ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಏಕೆ ಹೊರಟನು?**

**ಉತ್ತರ:**

ಸಿದ್ಧಾರ್ಥನು ಕಾಡಿನಿಂದ ಜನರ ಪ್ರೀತಿಯನ್ನು ಹುಡುಕುತ್ತ ನಾಡಿನತ್ತ ಹೊರಟನು.

**ಪ್ರಶ್ನೆ 5:**

**ಸಿದ್ಧಾರ್ಥನು ಕಂಡುಕೊಂಡ ಬದುಕಿನ ಗೂಢಾರ್ಥವೇನು?**

**ಉತ್ತರ:**

ಸಿದ್ಧಾರ್ಥನು ತಪಸ್ಸಿಗಿಂತ ಜೀವಪ್ರೀತಿ ದೊಡ್ಡದೆಂಬ ಬದುಕಿನ ಗೂಡಾರ್ಥವನ್ನು ಕಂಡು ಕೊಂಡನು.

**ಪ್ರಶ್ನೆ 6:**

**ಬೋಧಿವೃಕ್ಷದ ಹಾಡು ಯಾರ ಜೀವನವನ್ನು ಕುರಿತು ತಿಳಿಸುತ್ತದೆ?**

**ಉತ್ತರ:**

ಬೋಧಿವೃಕ್ಷದ ಹಾಡು ಬುದ್ಧನ ಜೀವನವನ್ನು ಕುರಿತು ತಿಳಿಸುತ್ತದೆ.

**ಪ್ರಶ್ನೆ 7:**

**ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು?**

**ಉತ್ತರ:**

ಬುದ್ಧನು ಪ್ರೀತಿ ದೊಡ್ಡದೆಂಬ ಬದುಕಿನ ಸತ್ಯವನ್ನು ಅರಿತುಕೊಂಡನು.

## ಪದ್ಯ – 2

## ಬೋಧಿವೃಕ್ಷದ ಹಾಡು

### ಆ. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ:

**ಪ್ರಶ್ನೆ 1:**

**ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಏನೆಂದು ಬಣ್ಣಿಸಿದ್ದಾರೆ?**

**ಉತ್ತರ:**

ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದ ಸಿದ್ಧಾರ್ಥನು ಮಡದಿ, ಮಗು, ಅರಮನೆಯ ಮೋಹ ತೊರೆದು, ಗೊತ್ತು ಗುರಿಯಿಲ್ಲದೆ ಕತ್ತಲಲ್ಲಿ ನಡೆದನು. ಕೋಗಿಲೆಯ ಹಾಡೊಂದು ದೂರದಿಂದ ಕೇಳಿಸಿತು, ಬೆಳಗ್ಗೆ ಆಗತಾನೇ ಕಾಣಿಸಿಕೊಳ್ಳುವ ಶುಕ್ರಗ್ರಹ ಬಾನಿನಲ್ಲಿ ಬೆಳಗಿತು, ಬೋಧಿವೃಕ್ಷದಲ್ಲಿ ಮಹಾ ಬೆಳಕನ್ನು ಕಂಡನು. ಕಾಡು ಕಾಡು ಅಲೆದ ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿಯಿತು.

**ಪ್ರಶ್ನೆ 2:**

**ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು?**

**ಉತ್ತರ:**

ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿಯ ಹೊಳೆಯು ಕೆರೆತುಂಬಿ ಹರಿಯುವಂತೆ ಕಂಡಿತು. ಗೂಡಿನಲ್ಲಿ ಹಕ್ಕಿಗಳ ಹೊಸರಾಗ ಕೇಳಿಸಿತು. ಮಕರಂದವನ್ನು ಸವಿಯಲು ದುಂಬಿ ಹೂವನ್ನು ಸೇರಿತು. ಎಲ್ಲ ಗಿಡವೂ ಒಂದನೊಂದು ಅಪ್ಪಿಕೊಂಡು ಕುಣಿಯುವಂತೆ ಕಾಣುತ್ತಿತ್ತು.

### ಇ. ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:

**ಪ್ರಶ್ನೆ 1:**

**ಸಿದ್ಧಾರ್ಥನು ಬುದ್ಧನಾದ ಪರಿ ಹೇಗೆ?**

**ಉತ್ತರ:**

ಸಿದ್ಧಾರ್ಥನು ಯುದ್ಧದ ದುರಂತವನ್ನು ನೋಡಿ ದುಃಖಪಡುತ್ತಾನೆ. ಅದರಿಂದ ನೊಂದ ಅವನು ಏಕಾಂಗಿಯಾಗಿ ಮಧ್ಯರಾತ್ರಿಯಲ್ಲಿ ವೀರನಂತೆ ಎದ್ದು ತನ್ನ ಪತ್ನಿ – ಮಗನನ್ನು ಬಿಟ್ಟು, ಸಿಂಹಾಸನದ ಮೋಹವನ್ನು ತೊರೆದು, ಯಾವುದೇ ಗೊತ್ತು ಗುರಿ ಇಲ್ಲದೆ ಕತ್ತಲಿನಲ್ಲಿ ಕಾಡಿಗೆ ಹೊರಟನು. ಅವನು ಕಾಡಿನಿಂದ ಕಾಡಿಗೆ ಅಲೆದ ನಂತರ ಅವನಿಗೆ ನಾಡಿನ ಅರ್ಥ ಹೊಳೆಯಿತು. ಅವನು ಬೋಧಿವೃಕ್ಷದ ಅಡಿಯಲ್ಲಿ ತಪಸ್ಸಿಗೆ ಕುಳಿತನು. ತಪಸ್ಸನ್ನು ಮಾಡುವಾಗ ಅವನಿಗೆ ದೂರದಿಂದ ಬೆಳಕು ಕಂಡಿತು. ಅವನು ಕಾಡಿನಲ್ಲಿ ಹಕ್ಕಿಯೊಂದು ತನ್ನ ಮರಿಗೆ ನೀರಿನ ಗುಟುಕನ್ನು ಕೊಟ್ಟು ಹಾರಿಹೋಗುವುದನ್ನು ಕಂಡನು. ಹುತ್ತದಿಂದ ಇರುವೆಯ ಗುಂಪು ಸಾಲಾಗಿ ಹೋಗುತ್ತಿರುವುದನ್ನು ಕಂಡನು. ಕಾಡಿನ ತುಂಬಾ ಪ್ರೀತಿಯ ಹೊಳೆಯು ಹರಿಯುತ್ತಿತ್ತು. ಅದನ್ನೆಲ್ಲಾ ನೋಡಿದ ಸಿದ್ಧಾರ್ಥನ ಮನಸ್ಸು ಕರಗಿತು. ಕಾಡನ್ನು ಬಿಟ್ಟು ನಾಡಿನ ಕಡೆಗೆ ಹೊರಟನು. ಪ್ರೀತಿಯನ್ನು ಹುಡುಕಿಕೊಂಡು ಜನರ ಬಳಿಗೆ ಹೋದನು. ಅವನಿಗೆ ತಪಸ್ಸಿಗಿಂತ ಜೀವಪ್ರೀತಿಯೇ ದೊಡ್ಡದು ಎಂದು ಅರಿವಾಯಿತು. ಹೀಗೆ ಸಿದ್ಧಾರ್ಥನು ಬುದ್ಧನಾದನು.

**ಪ್ರಶ್ನೆ 2:**

**ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕವಿಗೆ ಹೇಗೆ ಕಂಡುಬಂದಿತು?**

**ಉತ್ತರ:**

ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಮರವು ಬಳ್ಳಿಯ ಹೂವನ್ನು ಮುಡಿದು ಅಪ್ಪಿಕೊಂಡಂತೆ ನಗುತ್ತಿತ್ತು. ಹಕ್ಕಿಯು ತನ್ನ ಮರಿಗೆ ಗುಟುಕು ಕೊಟ್ಟು ಹಾರಿತು. ಇರುವೆಗಳು ಹುತ್ತದಿಂದ ಹೊರಗೆ ಬಂದು ಗುಂಪಾಗಿ ಸಾಲುಗಟ್ಟಿ ನಡೆಯುತ್ತಿತ್ತು. ಬೆಳ್ಳಕ್ಕಿಯು ಗುಂಪಾಗಿ ಬಾನಿಗೆ ಏಣಿಯನ್ನು ಹಾಕುವಂತೆ ಕಂಡವು. ಕಾಡು ತುಂಬ ಪ್ರೀತಿಯ ಹೊಳೆಯು ಕೆರೆ ತುಂಬಿ ಹರಿಯುವಂತೆ ಕಾಣುತ್ತಿತ್ತು. ಹಕ್ಕಿ ಗೂಡಿನಲ್ಲಿ ಹೊಸರಾಗ ಕೇಳಿಬಂದಿತು.





ದುಂಬಿಯು ಮಕರಂದದ ಸವಿಯನ್ನು ಸವಿಯಲೆಂದು ಹೂವಿನಿಂದ ಹೂವಿಗೆ ಹಾರುತ್ತಿತ್ತು. ಎಲ್ಲ ಗಿಡವೂ ಒಂದನ್ನೊಂದು ಅಪ್ಪಿಕೊಂಡು ಕುಣಿಯುವಂತೆ ಕವಿಗೆ ಕಂಡಿತು.

## ಈ. ಸಂದರ್ಭದೊಡನೆ ವಿವರಿಸಿರಿ:

**1. ಗೊತ್ತು ಗುರಿ ಇಲ್ಲದೆ ಕತ್ತಲಲ್ಲಿ ನಡೆದನು.**

**ಉತ್ತರ:** ಪ್ರಸ್ತುತ ಈ ವಾಕ್ಯವನ್ನು 'ಡಾ. ಬಸವರಾಜ ಸಬರದ'ರವರು ಬರೆದಿರುವ 'ಪದಕಟ್ಟಿ ಹಾಡೇನ' ಎಂಬ ಕವನ ಸಂಕಲನದಿಂದ ಆಯ್ದ 'ಬೋಧಿವೃಕ್ಷದ ಹಾಡು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಸಿದ್ಧಾರ್ಥನು ತನ್ನ ಪತ್ನಿ, ಮಗ, ಅರಮನೆಯನ್ನು ತೊರೆಯುವ ಸಂದರ್ಭದಲ್ಲಿ ಕವಿ ಈ ಮೇಲಿನ ಮಾತನ್ನು ಹೇಳಿದ್ದಾರೆ.

**ವಿವರಣೆ:** ಸಿದ್ಧಾರ್ಥನು ಯುದ್ಧ ಬಿಟ್ಟು ಪ್ರೀತಿಯ ಮಾರ್ಗವನ್ನು ಹುಡುಕುವ ಸಲುವಾಗಿ ತನ್ನ ಪತ್ನಿ, ಮಗ, ಅರಮನೆಯ ಮೋಹವನ್ನು ತೊರೆದು ಯಾವ ಗೊತ್ತು ಗುರಿಯಿಲ್ಲದೆ ಏಕಾಂಗಿಯಾಗಿ ಮಧ್ಯರಾತ್ರಿ ವೀರನಂತೆ ಕಾಡಿನ ಕಡೆಗೆ ಹೋಗುತ್ತಾನೆ ಎಂದು ಕವಿ ಹೇಳುತ್ತಾರೆ.

**ವಿಶೇಷತೆ:** ಸಿದ್ಧಾರ್ಥನು ತನ್ನ ವ್ಯಾಮೋಹವನ್ನು ತ್ಯಜಿಸುವುದು ಇಲ್ಲಿ ವ್ಯಕ್ತವಾಗಿದೆ.

**2. ಕಾಡತುಂಬ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು**

**ಉತ್ತರ:** ಪ್ರಸ್ತುತ ಈ ವಾಕ್ಯವನ್ನು 'ಡಾ. ಬಸವರಾಜ ಸಬರದ'ರವರು ಬರೆದಿರುವ 'ಪದಕಟ್ಟಿ ಹಾಡೇನ' ಎಂಬ ಕವನ ಸಂಕಲನದಿಂದ ಆಯ್ದ 'ಬೋಧಿವೃಕ್ಷದ ಹಾಡು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಸಿದ್ಧಾರ್ಥನು ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿಯು ಕಂಡ ಬಗೆಯನ್ನು ಕವಿ ವಿವರಿಸುವ ಸಂದರ್ಭದಲ್ಲಿ ಮೇಲಿನ ವಾಕ್ಯ ಬಂದಿದೆ.

**ವಿವರಣೆ:** ಸಿದ್ಧಾರ್ಥನು ಭೋಧಿವೃಕ್ಷದಲ್ಲಿ ಮಹಾ ಬೆಳಕನ್ನು ಕಂಡನು. ಕಾಡಿನಲ್ಲಿರುವ ಪ್ರಕೃತಿಯ ಸೌಂದರ್ಯಗಳು ಅವನ ಮನಸ್ಸನ್ನು ಸೆಳೆಯಿತು. ಹಕ್ಕಿಯೊಂದು ತನ್ನ ಮರಿಗೆ ಗುಟುಕು ನೀರನ್ನು ಕುಡಿಸಿ ಸಂತೋಷದಿಂದ ಆಕಾಶದ ಎತ್ತರಕ್ಕೆ ಹಾರಿ ಹೋಯಿತು. ಇರುವೆಗಳು ಹುತ್ತದಿಂದ ಹೊರಗೆ ಬಂದು ಸಾಲುಗಟ್ಟಿ ನಡೆಯುತ್ತಿತ್ತು. ಬೆಳ್ಳಕ್ಕಿಯು ಗುಂಪಾಗಿ ಬಾನಿಗೆ ಹಾರಿದಾಗ ಆಕಾಶಕ್ಕೆ ಏಣಿಯನ್ನು ಹಾಕುವಂತೆ ಕಂಡವು. ಕಾಡು ತುಂಬ ಪ್ರೀತಿಯ ಹೊಳೆಯು ಕೋಡಿಯಂತೆ ಹರಿಯಿತು ಎಂದು ಕವಿ ಪ್ರಕೃತಿಯ ಸೊಬಗನ್ನು ವರ್ಣಿಸಿದ್ದಾರೆ.
**ವಿಶೇಷತೆ:** ಸಿದ್ಧಾರ್ಥನು ಬುದ್ಧನಾದಾಗ ಪ್ರಕೃತಿಯ ಸೊಬಗು ಮತ್ತಷ್ಟು ಇಮ್ಮಡಿಯಾಯಿತು ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

**3. ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ಬಂದನು.**

**ಉತ್ತರ:** ಪ್ರಸ್ತುತ ಈ ವಾಕ್ಯವನ್ನು 'ಡಾ. ಬಸವರಾಜ ಸಬರದ'ರವರು ಬರೆದಿರುವ 'ಪದಕಟ್ಟಿ ಹಾಡೇನ' ಎಂಬ ಕವನ ಸಂಕಲನದಿಂದ ಆಯ್ದ 'ಬೋಧಿವೃಕ್ಷದ ಹಾಡು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ:** ಸಿದ್ಧಾರ್ಥನು ಬೋಧಿವೃಕ್ಷದ ಕೆಳಗೆ ತಪಸ್ಸು ಮಾಡುವಾಗ ತಪಸ್ಸಿಗಿಂತ ಜೀವಪ್ರೀತಿಯೇ ದೊಡ್ಡದು ಎಂಬ ಅಂಶ ಅರಿವಾಗುವ ಸಂದರ್ಭದಲ್ಲಿ ಕವಿಯು ಈ ಮೇಲಿನ ವಾಕ್ಯವನ್ನು ಹೇಳಿದ್ದಾರೆ.
**ವಿವರಣೆ:** ತಪಸ್ಸನ್ನು ಮಾಡುವಾಗ ಅವನಿಗೆ ದೂರದಿಂದ ಬೆಳಕನ್ನು ಕಂಡನು. ಅವನು ಕಾಡಿನಲ್ಲಿ ಹಕ್ಕಿಯೊಂದು ತನ್ನ ಮರಿಗೆ ನೀರನ್ನು ಕೊಟ್ಟು ಹಾರಿಹೋಗುವುದನ್ನು ನೋಡಿದನು. ಹುತ್ತದಿಂದ ಇರುವೆಯ ಗುಂಪು ಸಾಲಾಗಿ ಹೋಗುತ್ತಿರುವುದನ್ನು ಕಂಡನು. ಅವನು ಕಾಡು ತುಂಬ ಪ್ರೀತಿಯ ಹೊಳೆಯು ಹರಿಯುತ್ತಿರುವುದನ್ನು ಕಂಡನು. ಹಕ್ಕಿ ಗೂಡಿನಲ್ಲಿ ಹೊಸ ಹಾಡು, ರಾಗ ಕೇಳಿಸಿತು, ಮಕರಂದ ಸವಿಯಲು ದುಂಬಿಯು ಹೂವನ್ನು ಸೇರುವುದನ್ನು ಕಂಡನು, ಗಿಡಗಿಡವೂ ಅಪ್ಪಿಕೊಂಡು ಕುಣಿಯುವುದನ್ನು ಕಂಡನು. ಸಿದ್ಧಾರ್ಥನ ಮನಸ್ಸು ಪ್ರಕೃತಿಯ ಈ ಮನೋಹರ ದೃಶ್ಯದಿಂದ ಕರಗಿತು. ಕಾಡನ್ನು ಬಿಟ್ಟು ನಾಡಿನ ಕಡೆಗೆ ಹೊರಟನು. ಪ್ರೀತಿಯನ್ನು

ಹುಡುಕಿಕೊಂಡು ಜನರ ಬಳಿಗೆ ಹೋದನು. ಅವನಿಗೆ ತಪಸ್ಸಿಗಿಂತ ಜೀವ ಪ್ರೀತಿಯೇ ದೊಡ್ಡದು ಎಂದು ಅರಿವಾಯಿತು.

**ವಿಶೇಷತೆ:** ಜೀವಪ್ರೀತಿಗಿಂತ ಮಿಗಿಲಾಗಿರುವುದು ಯಾವುದೂ ಇಲ್ಲ ಎನ್ನುವುದೇ ಈ ಸಂದರ್ಭದ ವೈಶಿಷ್ಟ್ಯ

## ಭಾಷಾಭ್ಯಾಸ

### ಅ. ಕೆಳಗಿನ ಸಮಾಸ ಪದಗಳನ್ನು ವಿಗ್ರಹವಾಕ್ಯ ಮಾಡಿ, ಸಮಾಸದ ಹೆಸರು ತಿಳಿಸಿರಿ:

**ಅ. ಮಧ್ಯರಾತ್ರಿ** = ರಾತ್ರಿಯ + ಮಧ್ಯ = ಅಂಶಿ ಸಮಾಸ

**ಆ. ಅರಮನೆ** = ಅರಸನ + ಮನೆ = ತತ್ಪುರುಷ ಸಮಾಸ

**ಇ. ಹೊಸರಾಗ** = ಹೊಸದು + ರಾಗ = ಕರ್ಮಧಾರೆಯ ಸಮಾಸ

**ಈ. ಹಿಂಡುಗಟ್ಟಿ** = ಹಿಂಡನ್ನು + ಕಟ್ಟಿ = ಕ್ರಿಯಾ ಸಮಾಸ

### ಆ. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ:

**ಮೋಹ** – ಜನರು ಹಣದ ಮೋಹವನ್ನು ತೊರೆದು ಪ್ರೀತಿಯ ಬಾಳನ್ನು ಬಾಳಬೇಕು.

**ಜೀವಪ್ರೀತಿ** – ಜೀವಪ್ರೀತಿಯಿಂದ ನಾವು ಎಲ್ಲರನ್ನು ಗೆಲ್ಲಬಹುದು.

**ಗೊತ್ತುಗುರಿ** – ಅಲೆಮಾರಿಗಳ ಜೀವನವು ಗೊತ್ತು ಗುರಿಯಿಲ್ಲದಾಗಿರುತ್ತದೆ.

**ಮಹಾಬೆಳಕು** – ಕಗ್ಗತ್ತಲಲ್ಲಿ ಒಂದು ಮೇಣದ ಬೆಳಕು ಕೂಡ ಮಹಾಬೆಳಕಂತೆ ಗೋಚರಿಸುತ್ತದೆ.

### ಇ. ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪ ಬರೆಯಿರಿ:

**ಅ. ಯುದ್ಧ** – ಜುದ್ಧ

**ಆ. ವೀರ** – ಬೀರ

**ಇ. ಅಡವಿ** – ಅಟವಿ

**ಈ. ಹಕ್ಕಿ** – ಪಕ್ಷಿ

**ಈ. ಕೆಳಗಿನ ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ:**

**ಅ. ಹಿಂಡು** = ಗುಂಪು, ಹಿಸುಕು

**ಆ. ಹೊಳೆ** = ನದಿ, ಜಗಮಗಿಸು

**ಇ. ತೊರೆ** = ತ್ಯಜಿಸು, ಝರಿ

**ಈ. ಕಾಡು** = ಅಡವಿ, ಪೀಡಿಸು

**ಉ. ಅಲೆ** = ತರಂಗ, ಗೊತ್ತು ಗುರಿ ಇಲ್ಲದೆ ಓಡಾಡು, ತೆರೆ